


## ಪಿಗಫೆಟ್ಟಾನ ಪಾತ್ರ

ಮಾನವನಮೊದಲಪ್ರಪಂಚಪ್ರದಕ್ಷಿಣೆಯೇನೋ ಇಂದಿಗೆ ಐದು ಶತಮಾನಗಳ ಹಿಂದೆ ಯಶಸ್ವಿಯಾಗಿ ಮುಗಿಯಿತು. ಆದರೆ ಅತ್ಯಂತ ರೋಮಾಂಚಕಾರಿಯಾದ ಆ ಯಾನದ ಬಗ್ಗೆ ನಮಗೆ ದೊರೆತಿರುವ ಮಾಹಿತಿಯ ಮೂಲವಾದರೂ ಯಾವುದು?

ಅದೇ ಮೆಗಲಾನನ ಸಾಹಸಯಾನ ತಂಡದಲ್ಲಿದ್ದ ಆಂಟೋನಿಯೊ ಪಿಗಫೆಟ್ಟಾ ಎಂಬ ಇಟಲಿಯ ನಾವಿಕ. ಇವನೇ ಈ ಯಾನದ ಇತಿಹಾಸಕಾರ. ಯಾನಕ್ಕೆ ಸಂಬಂಧಿಸಿದ ಪ್ರತಿಯೊಂದು ವಿಷಯವನ್ನೂ ಕರಾರುವಾಕ್ಕಾಗಿ ಬರೆದಿಟ್ಟ ಪಿಗಫೆಟ್ಟಾನ ಪುಸ್ತಕವೇ ಅದನ್ನು ಕುರಿತ ವಿವರಗಳ ಮೂಲ. ಅದನ್ನು ಓದಿದಾಗ ಮೈ ಜುಂ ಎನ್ನುವುದರೊಂದಿಗೇ ಮಾನವನ ದಿನನಿತ್ಯದ ಅಗತ್ಯಗಳಾದ ಪುಷ್ಟಿಕರವಾದ ಆಹಾರ, ಶೌಚ, ನಿದ್ರೆ, ವಿಶ್ರಾಂತಿ, ಮುಂತಾದ ವಿಷಯಗಳಲ್ಲಿ ಅಂದಿನ ನಾವಿಕರ ಶೋಚನೀಯ ಪರಿಸ್ಥಿತಿಯನ್ನು ಕುರಿತು ಅಯ್ಯೋ ಎನ್ನುವಂತಾಗುತ್ತದೆ. ಯಾವುದೇ ಕಾರ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು, ಮಾಹಿತಿಗಳನ್ನು, ಅಂಕಿಅಂಶಗಳನ್ನು ಕ್ರಮಬದ್ಧವಾಗಿ ದಾಖಲೆ ಮಾಡಿಡುವ ಅಗತ್ಯದ ಮಹತ್ವದ ಬಗ್ಗೆ ಅರಿವಾಗುತ್ತದೆ.


ಮೆಗಲಾನ್‌ನ ಹಡಗುಗಳು ಮುಂದೆ ಅವನ ಹೆಸರನ್ನೇ ಇಡಲಾದ ಜಲಸಂಧಿಯಲ್ಲಿ ಸಾಗುತ್ತಿರುವ ದೃಶ್ಯ, ಕಲಾವಿದನ ಕಲ್ಪನೆಯಲ್ಲಿ

ಉದ್ದವಿದ್ದು, 120 ಟನ್ ತೂಗುತ್ತಿತ್ತು. ಇದಕ್ಕೆ ಹೋಲಿಸಿದಲ್ಲಿ ಇಂದು ಸರಕನ್ನು ಸಾಗಿಸುವ ದೊಡ್ಡ ಹಡಗುಗಳು (ಕಂಟೈನರ್ ಶಿಪ್ಸ್) 1300 ಅಡಿ ಉದ್ದವಿದ್ದು, ಸುಮಾರು ಎರಡೂವರೆ ಲಕ್ಷ ಟನ್ ತೂಗುತ್ತವೆ!

ಮೆಗಲಾನನ ಈ ಹಾಯಿ (ಸೆಯ್ಲ್) ಹಡಗುಗಳ ಚಲನೆಯ ಮೂಲ, ಸಾಗರ ಸಮುದ್ರಗಳ ಮೇಲೆ ಬೀಸುವ ಗಾಳಿಯಾಗಿತ್ತು. ಚುಕ್ಕಾಣಿಯನ್ನು (ರಡ್ಡರ್) ಅತ್ತಿತ್ತ ಸರಿಸುವ ಮೂಲಕ ಅವುಗಳು ಚಲಿಸುತ್ತಿದ್ದ ದಿಕ್ಕನ್ನು ರಟ್ಟೆಯ ಬಲದಿಂದ ಬದಲಿಸುವುದೂ ಸುಲಭವಾಗಿರಲಿಲ್ಲ. ಆದರೆ ಇಂದಿನ ಬೃಹತ್ ಸರಕು ಹಡಗುಗಳು, ಆಯಿಲ್ ಟ್ಯಾಂಕರ್ ಹಡಗುಗಳು ಹಾಗೂ ವಿಮಾನ ವಾಹಕ ಯುದ್ಧನೌಕೆಗಳು ಡೀಸಲ್ ಯಂತ್ರಗಳನ್ನು ಇಲ್ಲವೇ ಪರಮಾಣು ಶಕ್ತಿಯನ್ನು ಅವಲಂಬಿಸುವ ಮೂಲಕ ನೀರ ಮೇಲೆ ಚಲಿಸುತ್ತವೆ. ಕೆಲವು ವಿಮಾನವಾಹಕ ನೌಕೆಗಳಲ್ಲಿ ಸುಮಾರು ಆರು ಸಾವಿರ ಜನ ಇರುತ್ತಾರೆ.

### ಭಾರೀ ಸವಾಲುಗಳು

ಇಂದಿನ ದೃಷ್ಟಿಯಿಂದ ಸಾಕಷ್ಟು ಚಿಕ್ಕವು ಎನ್ನಬಹುದಾದ ಮೆಗಲಾನನ ಹಡಗುಗಳು ಮೊದಲಿಗೆ ಸ್ಪೇನ್‌ನ ಪಶ್ಚಿಮದಲ್ಲಿರುವ ಕೆನೆರಿ ದ್ವೀಪಗಳ ಮಾರ್ಗವಾಗಿ, ದಕ್ಷಿಣ ಅಮೆರಿಕ ಎಂದು ಕರೆಯಲಾಗುವ ಭೂಭಾಗದತ್ತ ಸಾಗಿದವು. ಅವು ಭೂಮಧ್ಯರೇಖೆಯನ್ನು ದಾಟುವ ವೇಳೆಯಲ್ಲಿ ಬಿರುಗಾಳಿಗೆ ಸಿಲುಕಿಕೊಂಡು ಜರ್ಜರಿತವಾದರೂ ಬಿರುಗಾಳಿ ನಿಲ್ಲುವ ವೇಳೆಯಲ್ಲಿ ತನಗೆ ಗೋಚರಿಸಿದ 'ಸೆಂಟ್ ಎಲ್ಮೋಸ್ ಫೈರ್' ಎಂಬ ನೈಸರ್ಗಿಕ ವಿದ್ಯಮಾನವನ್ನು ತನ್ನ ಕಷ್ಟ ಕೊನೆಗಾಣಿಸ ಬಂದ ದೈವ ಸಾಕ್ಷಾತ್ಕಾರವೆಂದು ನಂಬಿದ ಮೆಗಲಾನ್ ಹೆದರದೇ ಮುನ್ನಡೆದ.

ಇಂದು ಜಗತ್ತಿನಲ್ಲಿನ ಹಡಗು ಹಾಗೂ ದೋಣಿಗಳಿರುವ ಸ್ಥಾನವನ್ನು ಉಪಗ್ರಹಗಳು ನಿಖರವಾಗಿ ಲೆಕ್ಕಹಾಕಬಲ್ಲವು. ಇದರೊಂದಿಗೇ ಆ ಹಡಗು–ದೋಣಿಗಳು ತಮ್ಮ ಮಾಲೀಕ ಸಂಸ್ಥೆಗಳ–ದೇಶಗಳ ಜೊತೆ ಉಪಗ್ರಹಗಳ ಮೂಲಕ ನಿರಂತರವಾಗಿ ಸಂಪರ್ಕ ಹೊಂದಿರುತ್ತವೆ. ಒಂದು ವೇಳೆ ವಿಶಾಲವಾದ ಸಾಗರಗಳಲ್ಲಿ ಬಿರುಗಾಳಿಗೆ ಸಿಲುಕಿಕೊಂಡು ಅಪಾಯಕ್ಕೀಡಾದರೆ, ಅವು ಉಪಗ್ರಹಗಳ ಮೂಲಕ ತಮಗುಂಟಾಗಿರುವ ಗಂಡಾಂತರದ ಬಗ್ಗೆ ಆರ್ತನಾದದ ಸಂದೇಶವನ್ನು ವಿಶೇಷ ಸಾಧನವೊಂದರ ಮೂಲಕ 'ಶೋಧನೆ ಹಾಗೂ ರಕ್ಷಣೆ'ಯಲ್ಲಿ ನಿರತರಾದ ಸಂಸ್ಥೆಗಳಿಗೆ ರವಾನಿಸಬಹುದು. ಅಂತಹ ಸಂದೇಶಗಳನ್ನು ಪಡೆದು ಸೂಕ್ತವಾದ ಸಂಸ್ಥೆಗಳಿಗೆ ರವಾನಿಸುವ ಸೌಲಭ್ಯವನ್ನು ಬೆಂಗಳೂರಿನಲ್ಲಿರುವ ಇಸ್ರೋ ಕೇಂದ್ರವೊಂದರಲ್ಲಿ ಸ್ಥಾಪಿಸಲಾಗಿದೆ.

ಬಿರುಗಾಳಿಯಿಂದ ಪಾರಾದ ನಂತರ ಆ ಖಂಡದ ತೀರಪ್ರದೇಶವನ್ನೇ ಹಿಂಬಾಲಿಸುತ್ತಾ ಮೆಗಲಾನನ ಹಡಗುಗಳು ಇಂದು ವಿಶ್ವವಿಖ್ಯಾತಿಯನ್ನು ಪಡೆದಿರುವ ಬ್ರೆಜಿಲ್‌ನ ವರ್ಣರಂಜಿತ ನಗರವಾದ ರಿಯೋ ಡಿ ಜನೈರೋ ಇರುವ ಸ್ಥಳವನ್ನು ತಲುಪಿ,